

# ಬೇರಿನ ಗಂಧ!

**ಕಾಲಚಕ್ರದ ತಿರುಗುಣಿಗೆ ಸಿಕ್ಕಿ ಬದುಕಿನ ಮೂಲಸೆಲೆಗಳನ್ನೇ ಕಳೆದುಕೊಂಡು ಮತ್ತೆಲ್ಲೋ ಹೋಗಿ ಬೇರೂರಿಕೊಳ್ಳಬೇಕಾದ ಸಂಕಟಕ್ಕೆ ಕನ್ನಡಿ ಹಿಡಿಯುವ ಕಿರುಚಿತ್ರ 'ಪರ್ಫ್ಯೂಮ್'.**

■ ಗೌರಿ

ಒಂದು ಕಾಲಕ್ಕೆ ವೈಭವವೋಪೇತವಾಗಿ, ಉಚ್ಛ್ರಾಯವಾಗಿ ಕಾಣುವ ಸಂಗತಿ, ಜೀವನಶೈಲಿ, ಮೌಲ್ಯಗಳೆಲ್ಲವೂ ಕಾಲಾನಂತರ ಹೊರಲಾಗದ ಹೊರೆಯಾಗಿ, ತ್ಯಜಿಸಬೇಕಾದ ತ್ಯಾಜ್ಯವಾಗಿ ಕಾಣಲಾರಂಭಿಸುತ್ತದೆ. ಕಾಲ ತನ್ನ ಚಲನೆಯಲ್ಲಿಯೇ ಇರಿಸಿಕೊಂಡಿರುವ ಈ ಪಲ್ಲಟಗಳು ಹೊಸ ತಲೆಮಾರಿನವರಿಗೆ ಸಂಭ್ರಮದ ಸಂಗತಿಯಾದರೆ ಹಳೆಯ ತಲೆಮಾರಿನವರಿಗೆ ಸಂಕಟವನ್ನು ತಂದೊಡ್ಡುತ್ತವೆ.

ಕಾಲದ ಪಲ್ಲಟದಿಂದ ಬೇರು ಕಿತ್ತುಕೊಂಡು ತೊಳಲುತ್ತಿರುವ ಮುದಿಮರಗಳ ಸಂಕಟವನ್ನು ಹಿಡಿದಿರುವ ಬೆಂಗಾಳಿ ಕಿರುಚಿತ್ರ 'ಪರ್ಫ್ಯೂಮ್'. ಕೇವಲ ವ್ಯಕ್ತಿಗತ ಸಂಕಟವನ್ನು ಕಾಣಿಸಿ ಸುಮ್ಮನಾಗದೆ, ಒಂದು ಸಂಸ್ಕೃತಿ, ತಲೆಮಾರಿನ ಸಂಕಟವನ್ನು ಹೃದಯಕಲಕುವ ಹಾಗೆ ಹಿಡಿದಿಡುವ ಕಾರಣಕ್ಕೆ ಗಮನಾರ್ಹ ಪ್ರಯತ್ನವಾಗಿ ಕಾಣುತ್ತದೆ.

ವೀರೇಶ್ವರ ರಾವ್ ಚೌಧರಿ ಕೋಲ್ಕತ್ತದ ಹಳೆಯ ಕಾಲದ ದೊಡ್ಡ ಮನೆಯಲ್ಲಿ ಒಬ್ಬಂಟಿಯಾಗಿ ಬದುಕುತ್ತಿರುವವರು. ಅವರಿಗೆ ವಯಸ್ಸಾದಂತೆ ಮನೆಗೂ ವಯಸ್ಸಾಗಿದೆ. ಅವರ ಹೆಂಡತಿಯೂ ತೀರಿಹೋಗಿದ್ದಾಳೆ. ವಿದೇಶದಲ್ಲಿರುವ ಮಗನಿಗೆ ಮನೆಯ ಜವಾಬ್ದಾರಿ ಹೊರಲು ಮನಸ್ಸಿಲ್ಲ. ಅಮ್ಮ ತನ್ನ ಜೊತೆಗೆ ವಿದೇಶಕ್ಕೆ ಬಂದಿದ್ದರೆ ಅವಳು ಇನ್ನೂ ಹೆಚ್ಚು ಕಾಲ ಬದುಕುಳಿಯುತ್ತಿದ್ದಳು ಎಂಬ ಕಹಿಯೂ ಅವನ ಮನಸಲ್ಲಿದೆ. ಮನೆಯನ್ನು ಮಾರಾಟ ಮಾಡುತ್ತೇನೆ. ನೀವು ನಮ್ಮೊಂದಿಗೆ ಬಂದಿರಿ ಎಂದು ಮಗ ಹೇಳಿದ್ದಾನೆ. ಹುಟ್ಟಿಬೆಳೆದ ಮನೆ, ಪರಿಸರವನ್ನು ವೃದ್ಧಾಪ್ಯದಲ್ಲಿ ಬಿಟ್ಟುಹೋಗುವುದು ಸುಲಭವೇ? ದುರ್ಗಾ ಪೂಜೆಗೆ ಇಡೀ ಕೋಲ್ಕತ್ತವೇ ಸಂಭ್ರಮಿಸುತ್ತಿರುವಾಗ ಚೌಧರಿ ಒಬ್ಬಂಟಿಯಾಗಿ ಮನೆಯಲ್ಲಿ ಓದುತ್ತ ಕೂತಿದ್ದಾರೆ. ಆಗ ಅವರನ್ನು ಕಾಣಲು ಅರ್ಷದ್ ಮಿಯಾ ಬರುತ್ತಾನೆ.



**ಹೆಸರು:** ಪರ್ಫ್ಯೂಮ್
**ನಿರ್ದೇಶನ:** ಅನಿಕೇತ್ ಮಿತ್ರ
**ತಾರಾಗಣ:** ಆಸೀತ್ ಬಸು, ಪಂಕಜ್, ಶಂಭು, ಜಾರ್ನಾ
**ಛಾಯಾಗ್ರಹಣ:** ಮೋಧೂರಾ ಪಾಲ್
**ಸಂಕಲನ:** ರಿತಾಜಿತ್ ರೇ
**ಸಂಗೀತ:** ಶುಭಜ್ಯೋರಿ

ಅರ್ಷದ್ ಮಿಯಾ ಸುಗಂಧದ್ರವ್ಯದ ವ್ಯಾಪಾರಿ. ಎಷ್ಟೋ ವರ್ಷಗಳ ನಂತರ ಈ ಮನೆಯನ್ನು ಹುಡುಕಿಕೊಂಡು ಬಂದಿದ್ದಾನೆ. ಅವನಿಗೆ ತಾನು ಇನ್ನೊಂದು ದುರ್ಗಾ ಪೂಜೆಯನ್ನು ನೋಡಲು ಉಳಿದುಕೊಳ್ಳುವುದಿಲ್ಲ. ಹಾಗಾಗಿ ತನ್ನ ಕೊನೆಯ ದುರ್ಗಾ ಪೂಜೆಯನ್ನು ಚೌಧರಿ ಮನೆಯಲ್ಲಿಯೇ ಕಳೆಯಬೇಕು ಎಂಬ ಆಸೆ.

ಅರ್ಷದ್ ಮಿಯಾ ಕಡುಬಡವ. ಚೌಧರಿ ಆಗರ್ಭ ಶ್ರೀಮಂತ. ಆದರೆ ತಮ್ಮನ್ನು ಹಿಂಡುತ್ತಿರುವ ಸಂಕಟದ ದೋಣಿಯಲ್ಲಿ ಅವರಿಬ್ಬರೂ ಸಮಾನರು. ಬೇರುಗಳನ್ನು ಕಿತ್ತುಕೊಳ್ಳುವ ನೋವು ಅವರನ್ನು ಇನ್ನಿಲ್ಲದಂತೆ ಬೇಯಿಸುತ್ತಿದೆ. ಅರ್ಷದ್ ಮಿಯಾ ಚೌಧರಿಗೆ ತನ್ನ ಸಣ್ಣ ಕಬ್ಬಿಣದ ಪೆಟ್ಟಿಗೆಯಲ್ಲಿನ ಒಂದು ದುಬಾರಿ ಬೆಲೆಯ ಸುಗಂಧದ್ರವ್ಯವನ್ನು ತೆಗೆದು ಕಾಣಿಕೆಯಾಗಿ ನೀಡುತ್ತಾನೆ. ಅದು ಚೌಧರಿಗೆ ತನ್ನ ಹೆಂಡತಿಯ, ತಾನು ಬಿಟ್ಟುಹೋಗುತ್ತಿರುವ ಸಂಸ್ಕೃತಿಯ ಸಾರಗಂಧವಾಗಿ ಕಾಣಿಸುತ್ತದೆ.

ಭಾವುಕ ನೆಲೆಯಲ್ಲಿಯೇ ಇಡೀ ಕಿರುಚಿತ್ರವನ್ನು ಕಟ್ಟಿದ್ದರೂ, ಅದರಲ್ಲಿಯೂ ಹಲವು ಸೂಕ್ಷ್ಮ ಎಳೆಗಳನ್ನು ಕಾಣಿಸುವ ಕೆಲಸವನ್ನು ನಿರ್ದೇಶಕರು ಮಾಡಿದ್ದಾರೆ. 'ನನಗೀಗ ದುರ್ಗೆಗೂ ಅಲ್ಲಾಹುವಿಗೂ ವ್ಯತ್ಯಾಸ ಕಾಣಿಸುತ್ತಿಲ್ಲ. ನಮ್ಮ ಮನೆಯಲ್ಲಿಯೇ ಕುಳಿತು ನೀನು ಪ್ರಾರ್ಥಿಸು' ಎಂದು ಚೌಧರಿ ಹೇಳುವುದು, 'ನಾನು ಮೊದಲ ಸಲ ಇಲ್ಲಿಗೆ ಬಂದಾಗ ನನ್ನ ತಂದೆ ದುಃಖಿತರಾಗಿದ್ದರು. ಅವರು ಯಾಕೆ ದುಃಖಿಸುತ್ತಿದ್ದಾರೆ ಎಂದು ಆಗ ತಿಳಿಯಲಿಲ್ಲ. ಆದರೆ ಬೇರು ಕಳೆದುಕೊಳ್ಳುವ ಸಂಕಟ ಏನೆಂದು ಈಗ ಗೊತ್ತಾಗುತ್ತಿದೆ' ಎನ್ನುವ ಅರ್ಷದ್ ಮಿಯಾನ ಮಾತುಗಳೆಲ್ಲವೂ ಸ್ಥಿತ್ಯಂತರಗಳನ್ನು ಸೂಕ್ಷ್ಮವಾಗಿ ಹಿಡಿದಿಡುತ್ತದೆ.

ಮಿತವಾದ ಆದರೆ ಶಕ್ತಿಶಾಲಿಯಾದ ಸಂಭಾಷಣೆ, ಭಾವುಕ ಹರಿವಿಗೆ ಪೂರಕವಾದ ಛಾಯಾಗ್ರಹಣ, ಹಿನ್ನೆಲೆ ಸಂಗೀತ, ಮುಖಭಾವದಲ್ಲಿಯೇ ಹೃದಯವನ್ನು ಕಲಕುವ ನಟನೆ – ಎಲ್ಲವೂ ಈ ಚಿತ್ರದ ಪರಿಣಾಮವನ್ನಷ್ಟೇ ಅಲ್ಲ, ಮೌಲ್ಯವನ್ನೂ ವರ್ಧಿಸಿವೆ.

ವಲಸೆ ಎನ್ನುವುದು ಈ ಕಾಲದ ಗುಣವೇ ಆಗಿಬಿಟ್ಟಿರುವ ಹೊತ್ತಿನಲ್ಲಿ ಈ ಕಿರುಚಿತ್ರ ನಮ್ಮೊಳಗೆ ಪ್ರಬಲವಾದ ತರಂಗವನ್ನಂತೂ ಎಬ್ಬಿಸುತ್ತದೆ. ಆ ತರಂಗದಲ್ಲಿ ನಮ್ಮ ಸುತ್ತಲಿನ ಬಿಂಬವೂ ಕಾಣಿಸಬಹುದು.

ಈ ಕಿರುಚಿತ್ರ ವೀಕ್ಷಣೆಗೆ bit.ly/3p2IGdM ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.